ನಿರ್ಧರಿಸಿದಾಗಲೇ ಕೆಲಸ ಬಿಟ್ಟೆ. ನನ್ನದೇ ಒಂದು ಐಟಿ ಫರ್ಮ್ ಶುರುಮಾಡಿದೆ. ಅಲ್ಲಿ ನನಗೆ ಸಾಕಷ್ಟು ಸಮಯ ಸಿಗುತ್ತಿತ್ತು. ನನ್ನ ಆಫೀಸ್ ಹಿಂಭಾಗದಲ್ಲಿಯೇ 'ಪಂಚರಂಗಿ ಪಾವ್ ಪಾವ್' ಧಾರಾವಾಹಿಯ ತಂಡದ ಆಫೀಸ್ ಇತ್ತು. ನಾವು ಹೊರಗಡೆ ಹೋದಾಗ ಅವರೂ ಸಿಗುತ್ತಿದ್ದರು. ಅವರಿಗೆ ನನ್ನ ನಟನೆಯ ಆಸಕ್ತಿಯ ಕುರಿತು ಹೇಳಿದೆ. ಅವರು ಆಫೀಸಿಗೆ ಬರಲು ಹೇಳಿದರು. ಹೋದೆ, ಅಲ್ಲಿ ಒಂದು ದೃಶ್ಯದ ಚಿತ್ರೀಕರಣವನ್ನೂ ಮಾಡಿದರು. ನನ್ನ ನಟನೆಯ ಪ್ರಯಾಣ ಶುರುವಾಗಿದ್ದು ಹೀಗೆ. ನಂತರ ನಾನು 'ಪರಿಮಿತ', 'ಕೋಗಿಲೆ' ಧಾರಾವಾಹಿಗಳಲ್ಲಿ ಸಣ್ಣ ಸಣ್ಣ ಪಾತ್ರಗಳಲ್ಲಿ ನಟಿಸಿದೆ. 'ಚಕ್ರವ್ಯೂಹ'ದಲ್ಲಿ ನಾಯಕನಾಗಿಯೂ ನಟಿಸಿದೆ. 'ಪ್ರೀತಿ ಎಂದರೇನು', ಈಗ ಉದಯದಲ್ಲಿ ಪ್ರಸಾರವಾಗುತ್ತಿರುವ 'ಮನಸಾರೆ' ಧಾರಾವಾಹಿಯಲ್ಲಿ ನಟಿಸುತ್ತಿದ್ದೇನೆ. ಸಿನಿಮಾಗಳಲ್ಲಿ ನಟಿಸುವ ಅವಕಾಶವೂ ಸಿಕ್ಕಿತು. 'ಕೈರಾಳಿ', '6ನೇ ಮೈಲಿ', 'ರಾಂಧವ' ನಟಿಸಿದೆ. 'ಸಿನಿಮಾ ಬಂಡಿ' ನನ್ನ ಮೊದಲ ತೆಲುಗು ಸಿನಿಮಾ.

**◆ 'ಸಿನಿಮಾ ಬಂಡಿ' ಚಿತ್ರದಲ್ಲಿ ನಟಿಸಿದ ಅನುಭವ ಹೇಗಿತ್ತು?**

2014ರಲ್ಲಿ ಪ್ರವೀಣ್ ಜೊತೆಯಲ್ಲಿ ನಾನೊಂದು ತಮಿಳು ಜಾಹೀರಾತು ಚಿತ್ರೀಕರಣ ಮಾಡಿದ್ದೆ. ಆಗಿಂದ ಪರಿಚಯ ಇತ್ತು. 2018ರಲ್ಲಿ ಒಂದು ದಿನ ನನಗೆ, 'ತೆಲುಗು ಸರಾಗವಾಗಿ ಮಾತನಾಡುವ ನಟರು ಯಾರಾದ್ರೂ ಪರಿಚಯ ಇದ್ದಾರಾ?' ಎಂದು ಮೆಸೇಜ್ ಮಾಡಿದರು. 'ನಾನೇ ಇದ್ದೀನಲ್ಲ, ಯಾಕೆ?' ಎಂದೆ. ಅವರು ಖುಷಿಯಿಂದ ಕರೆದು ಕಥೆ ಹೇಳಿದರು.

'ಸಿನಿಮಾ ಬಂಡಿ' ಕಥೆಯನ್ನು ನಿರ್ಮಾಪಕ ರಾಜ್ ನಿಡಿಮೊರು ಅವರಿಗೆ ನಿರ್ದೇಶಕರು ಹೇಳಿದಾಗ ಅವರು ಹತ್ತು ನಿಮಿಷದ ವಿಡಿಯೊ ಮಾಡಿಕೊಂಡು ಬರುವಂತೆ ಕೇಳಿದ್ದರು. ಪ್ರವೀಣ್, ಒಟ್ಟು ನಲ್ವತ್ತು ನಿಮಿಷಗಳಲ್ಲಿ ಈ ಸಿನಿಮಾದ ಕಥೆಯನ್ನು ಹೇಳುವ ಒಂದು ಕಿರುಚಿತ್ರವನ್ನೇ ಸಿದ್ಧ ಮಾಡಿ ಅವರಿಗೆ ತೋರಿಸಿದ್ದರು. ಅದನ್ನು ನೋಡಿ ಖುಷಿಯಾದ ರಾಜ್ ಸಿನಿಮಾ ನಿರ್ಮಾಣಕ್ಕೆ ಒಪ್ಪಿಗೆ ಕೊಟ್ಟರು. ರಾಜ್ 'ಫ್ಯಾಮಿಲಿ ಮ್ಯಾನ್'ನಂಥ ಯಶಸ್ವಿ ವೆಬ್ ಸಿರೀಸ್‌ನ ನಿರ್ಮಾಪಕ ಮತ್ತು ನಿರ್ದೇಶಕರು. ಅವರಿಗೆ ಸಿನಿಮಾ ಮಾಧ್ಯಮ ತುಂಬ ಚೆನ್ನಾಗಿ ಗೊತ್ತು. ಅವರಿಗೇ ಇಷ್ಟವಾಗಿದೆ ಎಂದಮೇಲೆ ನಮ್ಮ ಮೇಲೆ ನಮಗೆ ವಿಶ್ವಾಸ ಬಂತು.

ದೊಡ್ಡ ಸಿನಿಮಾಗಳಾದರೆ ತುಂಬ ದೊಡ್ಡ ತಂಡ ಇರುತ್ತದೆ. ಅವರ ಆಲೋಚನೆಗಳು, ದೃಷ್ಟಿಕೋನ ಎಲ್ಲವೂ ಬೇರೆಯದೇ ಆಗಿರುತ್ತವೆ. ನಮ್ಮದು ಸಣ್ಣ ಸಿನಿಮಾ. ಸಿನಿಮಾ ಸಣ್ಣದಾದರೂ ಚೆನ್ನಾಗಿ ಮಾಡಬೇಕು ಎಂಬ ಹಟ ನಮಗಿತ್ತು. ಹಾಗೆಯೇ ಮಾಡಿದೆವು. ಆದರೆ ಪ್ರೇಕ್ಷಕರು ದೊಡ್ಡದಾಗಿ ಗೆಲ್ಲಿಸಿದರು. ತುಂಬ ವರ್ಷಗಳಿಂದ ಸಿನಿಮಾ ನೋಡದೇ ಇರುವವರೂ ಈ ಸಿನಿಮಾ ನೋಡಿ ಖುಷಿಪಟ್ಟರು. ಒಂದಿಷ್ಟು ವರ್ಷಗಳ ಪ್ರಯಾಣ, ಕಷ್ಟ, ಎಲ್ಲವೂ ಫಲಕೊಟ್ಟ ಸಮಯ ಇದು. ಚಿತ್ರರಂಗ ಎಲ್ಲ ರೀತಿಯ ಅನುಭವಗಳನ್ನೂ ಕೊಟ್ಟು ತಾಳ್ಮೆ ಕಲಿಸುತ್ತದಲ್ಲ, ಅದರ ಹಬ್ಬದೂಟ ಇದು.

**◆ ನಟನೆಂಬುದನ್ನು ಮರೆತು ನೀವು 'ಸಿನಿಮಾ ಬಂಡಿ' ನೋಡಿದಾಗ, ಆ ಸಿನಿಮಾದಲ್ಲಿನ ಯಾವ ಅಂಶ ನಿಮಗೆ ಇಷ್ಟವಾಯ್ತು?**

ನಾನು ಪ್ರತಿ ಸಿನಿಮಾವನ್ನೂ ಪ್ರೇಕ್ಷಕನ ಹಾಗೆಯೇ ನೋಡುತ್ತೇನೆ. ಫಸ್ಟ್ ಡೇ ಫಸ್ಟ್ ಶೋಗೆ ಕಿರುಚಾಡಿಕೊಂಡು ಸಿನಿಮಾ ನೋಡುತ್ತಾರಲ್ಲಾ, ನಾನೂ ಹಾಗೆಯೇ ನೋಡುತ್ತೇನೆ. ಹಾಗೆ ನೋಡಿದಾಗ ಈ ಸಿನಿಮಾದಲ್ಲಿ ಬಳಸಿರುವ ಭಾಷೆ ತುಂಬ ತಾಜಾ ಅನಿಸಿತು. ಕೋಲಾರ ಜಿಲ್ಲೆಯ ಮುಳಬಾಗಿಲ ಹತ್ತಿರ ಚಿತ್ರವನ್ನು ಚಿತ್ರೀಕರಿಸಿದ್ದು. ಅಲ್ಲಿನ ಭಾಷೆಯ ಸೊಗಡು ಇಲ್ಲಿದೆ. ಹೇಳಲು




'ಸಿನಿಮಾ ಬಂಡಿ' ಚಿತ್ರದ ಪೋಸ್ಟರ್

ಹೊರಟಿರುವ ವಿಷಯ ಫ್ರೆಷ್ ಇದೆ. ಇಲ್ಲಿನ ಹಾಸ್ಯ, ಹಾಡು, ಸಂದೇಶ ಯಾವುದೂ ಒತ್ತಾಯವಾಗಿ ತುರುಕಿದ್ದಲ್ಲ. ಅದೆಲ್ಲ ಕಥೆಯ ಒಳಗಿನಿಂದಲೇ ಬೆಳೆದಿದ್ದು. ಕಂಟೆಂಟ್ ಈಸ್ ಕಿಂಗ್ ಅನ್ನುವ ಮಾತು ಈ ಸಿನಿಮಾಗೆ ತುಂಬ ಚೆನ್ನಾಗಿ ಒಪ್ಪುತ್ತದೆ. ಮೇ 14ನೇ ತಾರೀಖಿಗೆ ಬಿಡುಗಡೆಯಾಗುತ್ತದೆ ಎಂದು ನಾವು ಜಾಹೀರು ಮಾಡಿದ್ದೇ ಹತ್ತು ದಿನಗಳ ಮೊದಲು. ಹೈಪ್ ಇಲ್ಲದಿರುವುದೇ ಒಂದು ರೀತಿ ಅಡ್ವಾಂಟೇಜ್ ಕೂಡ ಆಯ್ತು.

**◆ ಈ ಪಾತ್ರಕ್ಕೆ ನಿಮ್ಮನ್ನು ನೀವು ಹೇಗೆ ಸಿದ್ಧಪಡಿಸಿಕೊಂಡಿರಿ?**

ನಾನು ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕು ಹುದುಕುಳದಲ್ಲಿ ಹುಟ್ಟಿ ಬೆಳೆದಿರದಿದ್ದರೆ ಪಾತ್ರಕ್ಕೆ ನನ್ನನ್ನು ನಾನು ಒಡ್ಡಿಕೊಳ್ಳಲು ಕಷ್ಟ ಆಗಬಹುದಿತ್ತು. ನಾನು ಹುಟ್ಟಿ ಬೆಳೆದ ಪರಿಸರದಲ್ಲಿ ಈ ಸಿನಿಮಾದ ಪಾತ್ರಗಳನ್ನು ಹೋಲುವ ವ್ಯಕ್ತಿಗಳನ್ನು ನೋಡಿಕೊಂಡೇ ಬೆಳೆದಿದ್ದೆ. ನನಗೆ ಆಟೊ ಓಡಿಸಲು ಬರುತ್ತಿರಲಿಲ್ಲ. ಮೊದಲ ಎರಡು ದಿನ ಅದನ್ನು ಕಲಿಯುವುದರಲ್ಲಿಯೇ ಹೋಯಿತು. ಮೊದಲ ದಿನ ಡ್ರೈವರ್ ಪಕ್ಕ ಕೂತು ಹೇಳಿಕೊಟ್ಟರು. ಎರಡನೇ ದಿನ ನಾನೇ ಆಟೊ ತೆಗೆದುಕೊಂಡು ಹೋಗಿ ನಾಲ್ಕುನೂರು ರೂಪಾಯಿ ಬ್ಯುಸಿನೆಸ್ ಕೂಡ ಮಾಡಿದೆ. ಆ ಕೆಲಸ ಮಾಡುತ್ತಲೇ ಆಟೊಗೆ ಬರುವ ಜನರು, ಮಾರುಕಟ್ಟೆಯಲ್ಲಿನ ಜನರ ವರ್ತನೆ, ಮಾತು, ಸ್ವಭಾವಗಳನ್ನು ಸೂಕ್ಷ್ಮವಾಗಿ ಗಮನಿಸಿದೆ. ಅದು ನನ್ನ ಪಾತ್ರವನ್ನು ನಿರ್ವಹಿಸಲು ಸಾಕಷ್ಟು ಸಹಾಯ ಮಾಡಿತು.

**◆ ನಿಮ್ಮ ಪ್ರಕಾರ ನಟನೆ ಎಂದರೆ ಏನು?**

ನನ್ನ ಪ್ರಕಾರ ನಟಿಸದಿರುವುದೇ ನಟನೆ. ನಟಿಸುವ ಬದಲಿಗೆ ಪಾತ್ರದ ಜೊತೆ ಬದುಕಬೇಕು. ಅದು ಒಂದು ಕ್ಷಣದ ಪಾತ್ರವಾಗಲಿ, ಎರಡು ತಾಸಿನ ಪಾತ್ರವಾಗಲಿ ಅದಕ್ಕೆ ನಮ್ಮನ್ನು ನಾವು ಪೂರ್ತಿಯಾಗಿ ಕೊಟ್ಟುಕೊಳ್ಳಬೇಕು. ಅದೇ ನಟನೆಯ ಬ್ಯೂಟಿ. ನಮ್ಮದಲ್ಲದ ಪಾತ್ರಗಳಲ್ಲಿ ಹೊಕ್ಕುಬರುವ ಅವಕಾಶ ಕೊಡುವುದೇ ಸಿನಿಮಾ ಮಾಧ್ಯಮದ ಬ್ಯೂಟಿ. ಕಳ್ಳ, ಪೊಲೀಸ್, ಡಾಕ್ಟರ್, ಇಂಜಿನಿಯರ್ ಹೀಗೆ ನಮ್ಮ ನಿಜಬದುಕಿನಲ್ಲಿ ಸಾಧ್ಯವಿಲ್ಲದ ಎಷ್ಟೋ ಸಂಗತಿಗಳನ್ನು ನಾವು ನಟನೆಯಲ್ಲಿ ಸಾಧ್ಯವಾಗಿಸುತ್ತಿರುತ್ತೇವೆ.

ನಟನೆ ನನಗೆ ಏನನ್ನು ನಂಬಬೇಕು ಏನನ್ನು ನಂಬಬಾರದು ಎಂದು ತಿಳಿಸಿದೆ. ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ತೋರಿಸಿಕೊಟ್ಟಿದೆ. ಪ್ರತಿ ಸಿನಿಮಾವೂ ಒಂದಿಲ್ಲಾ ಒಂದು ರೀತಿಯಲ್ಲಿ ಇನ್‌ಸ್ಪಿರೇಷನಲ್ ಆಗಿರುತ್ತವೆ. ಹಾಗೆಯೇ ಪ್ರತಿಯೊಬ್ಬನ ಬದುಕೂ ಒಂದಿಲ್ಲಾ ಒಂದು ರೀತಿಯಲ್ಲಿ ಸಿನಿಮಾಗೆ ಇನ್‌ಸ್ಪಿರೇಷನ್ ಆಗಬಲ್ಲದು. ಹೀಗೆ ಸಮಾಜಕ್ಕೂ ಸಿನಿಮಾಗೂ ತುಂಬ ಆಳವಾದ, ಅಷ್ಟೇ ಸಂಕೀರ್ಣವಾದ ಸಂಬಂಧವಿದೆ.

**◆ ನಿರ್ದೇಶನದ ಒಲವು ಇದೆಯೇ?**

ನಿರ್ದೇಶನದಲ್ಲಿ ಆಸಕ್ತಿ ಇದೆ. ನಾನೇ ಒಂದಿಷ್ಟು ಕಥೆಗಳನ್ನೂ ಸಿದ್ಧ ಮಾಡಿಟ್ಟುಕೊಂಡಿದ್ದೇನೆ. ಬರವಣಿಗೆಯಲ್ಲಿ ತೊಡಗಿಕೊಂಡಿದ್ದೇನೆ. ಆದರೆ ಅದು ಯಾವಾಗ ಸಾಧ್ಯವಾಗುತ್ತದೆ ಗೊತ್ತಿಲ್ಲ. ಸದ್ಯಕ್ಕೆ ತೆಲುಗಿನಿಂದ ಎರಡು ಸಿನಿಮಾಗಳಲ್ಲಿ ನಟಿಸುವ ಅವಕಾಶ ಬಂದಿದೆ. ಮತ್ತೊಂದಿಷ್ಟು ಮಾತುಕತೆಯ ಹಂತದಲ್ಲಿದೆ. ಕನ್ನಡದಲ್ಲಿಯೂ ಒಳ್ಳೆಯ ಅವಕಾಶಗಳು ಸಿಗುವ ನಂಬಿಕೆ ಇದೆ.

**◆ ನಿಮ್ಮ ನಿರ್ದೇಶನದ ಮೊದಲ ಸಿನಿಮಾ ಕನ್ನಡದ್ದೋ ಅಥವಾ ತೆಲುಗಿನದ್ದೋ?**

ನಾನು ಆಲೋಚಿಸುವುದು ಕನ್ನಡ. ನನ್ನ ಮನಸಲ್ಲಿ ಕಥೆ ಹುಟ್ಟಿದ್ದು ಬೆಳೆದಿದ್ದೆಲ್ಲವೂ ಕನ್ನಡದಲ್ಲಿ. ನಾನು ಬರೆದಿರುವುದೂ ಕನ್ನಡದಲ್ಲಿಯೇ. ಹಾಗಾಗಿ ಕನ್ನಡದಲ್ಲಿಯೇ ಸಿನಿಮಾ ಮಾಡುವುದು ನನ್ನ ಕನಸು. ಕಾಲ ಯಾವಾಗ ಕೂಡಿ ಬರುತ್ತದೆಯೋ ನೋಡಬೇಕು. ■